**ಓ.ಎಸ್. ನಂಬರ್ : 131/2019**
**ಪಿ .ಡಬ್ಲ್ಯು : 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 25.03.2025

**ಪಾಟೀ ಸವಾಲು : ಪ್ರತಿವಾದಿಯ ಪರ ವಕೀಲರಿಂದ**

ದಾವಾ ಸ್ವತ್ತಿನ ನಕ್ಷೆಯನ್ನು ಹಾಜರುಪಡಿಸಿರುತ್ತೀರಾ ಅಂದರೆ ಕೊಟ್ಟಿರಬಹುದು ಎನ್ನುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟ ನಕ್ಷೆಯನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತಿನ ಖಾತೆ ನನ್ನ ಹೆಸರಿಗೆ ಆದ ನಂತರ ಅದರ ಎಂ.ಸಿ. ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಅಂದರೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನಾನು ದಾವಾ ಸ್ವತ್ತಿನ ನಕ್ಷೆಯನ್ನು ನೋಡಿಲ್ಲ ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

1979 ರಲ್ಲಿ ವಿಭಾಗ ಪತ್ರವಾದ ನಂತರ ಪ್ರತಿವಾದಿಗಳು ಮತ್ತು ಅವರ ಅಕ್ಕ ತಂಗಿಯರು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದರು ಅಂದರೆ ಸರಿಯಲ್ಲ. ಪ್ರತಿವಾದಿಗಳೊಂದಿಗೆ ನನ್ನ ತಂದೆ ತಾಯಿಯರು ಇದ್ದರು ಅಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ ಗಳು ನನಗೆ ಪಾಲುಪರಿಕತ್ತಿನ ಆಧಾರದ ಮೇಲೆ ಬಂದಿರುತ್ತದೆ. ಸರ್ವೆ ನಂಬರ್ 51/2 ನನಗೆ ಪಾಲುಪರಿಕತ್ತಿನಲ್ಲಿ ಬಂದಿಲ್ಲ ಮತ್ತು ಅದು ಸದರಿ ದಾಖಲಾತಿಯಲ್ಲಿ ನಮೂದು ಆಗಿಲ್ಲ ಅಂದರೆ ಸರಿಯಲ್ಲ. ಸದರಿ ಪಾಲುಪರಿಕತ್ತಿನ ಪ್ರಕಾರ ಸರ್ವೆ ನಂಬರ್ 51/2 ನಮೂದು ಆಗಿಲ್ಲ ಅಂದರೆ ಸರಿ

ಆದರೆ ನನಗೆ ಬಂದಿದೆ ಎನ್ನುತ್ತಾರೆ. ಸರ್ವೆ ನಂಬರ್ 51/2 ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು ಎನ್ನುತ್ತಾರೆ. 1979 ರಲ್ಲಿ ಪಾಲುಪರಿಕತ್ತಿನ ಮೂಲಕ ನನಗೆ ಸರ್ವೆ ನಂಬರ್ ಗಳು ಬಂದಿದ್ದು ಅವುಗಳನ್ನು ನಾನು 2000 ನೇ ಇಸವಿಯವರೆಗೆ ಖಾತೆ ಮಾಡಿಸಿಲ್ಲ ಅಂದರೆ ನಾನು ಬೇರೆ ಕಡೆ ಇದುದ್ದರಿಂದ ಮಾಡಿಸಿಲ್ಲ ಎನ್ನುತ್ತಾರೆ. ನಾನು 21 ವರ್ಷಗಳ ಕಾಲ ಖಾತೆ ಮಾಡಿಸಲು ಅರ್ಜಿ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಅಂದರೆ ಇಲ್ಲ ಎನ್ನುತ್ತಾರೆ. ನನಗೆ ಯಾವ ಸರ್ವೆ ನಂಬರ್ ಗೊತ್ತಿಲ್ಲ ಆ ಬಗ್ಗೆ ಖಾತೆಗೆ ನಾನು ಅರ್ಜಿಯನ್ನು ಕೊಟ್ಟಿಲ್ಲ ಅಂದರೆ ಸರಿಯಲ್ಲ. 2007 ನೇ ಇಸವಿಯವರೆಗೂ ನಾನು ಖಾತೆಯನ್ನು ನೋಡಿಲ್ಲ ಅಂದರೆ ಸರಿಯಲ್ಲ. ನಾನು ಉಷಾದೇವಿಯವರಿಗೆ 2007 ನೇ ಇಸವಿಯ ಕರಾರು ಮಾಡಿಕೊಂಡಾಗ ಸದರಿ ಸರ್ವೆ ನಂಬರ್ ನ ಬಗ್ಗೆ ತಿಳಿದು ಬಂದಿರುತ್ತದೆ ಅಂದರೆ ಸರಿಯಲ್ಲ.

ನಾನು 2007 ರಲ್ಲಿ ಕರಾರು ಮಾಡಿಕೊಳ್ಳುವ ಮೊದಲೇ 1 ನೇ ಪ್ರತಿವಾದಿ ದಾವಾ ಹಾಕಿರುತ್ತಾರೆ ಅಂದರೆ ಸರಿ. ಮುಂದುವರೆದು ನನ್ನ ವಿಳಾಸವನ್ನು ಮರೇಮಾಚಿ ಬೇರೆ ವಿಳಾಸವನ್ನು ಹಾಕಿ ನನ್ನ ಮೇಲೆ ದಾವಾ ಹಾಕಿರುತ್ತಾರೆ ಎನ್ನುತ್ತಾರೆ. ಆನಂತರ ನಾನು ಮನೆ ಖಾಲಿ ಮಾಡಿಸಲು ಠಾಣೆಗೆ ಹೋದಾಗ ಅವರು ದಾವಾ ಹಾಕಿರುವ ದಾವಾದ ಪ್ರತಿಯನ್ನು ಪೊಲೀಸಿನವರು ಕೊಟ್ಟಿರುತ್ತಾರೆ ಎನ್ನುತ್ತಾರೆ. 2007 ರಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿದ್ದರು

ಅಂದರೆ ಸರಿಯಲ್ಲ. ಓ.ಎಸ್. 66/2012 ರಲ್ಲಿ ಉಷಾದೇವಿಯವರು ನನ್ನ ಮೇಲೆ ಹಾಕಿದ ದಾವಾದಲ್ಲಿ ನಾನು ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದು ಒಪ್ಪಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ನಾನು ಕಾನೂನು ಬದ್ದವಾಗಿ ಉಷಾದೇವಿಯರಿಗೆ ಕರಾರು ಒಪ್ಪಂದವನ್ನು ಮಾಡಿ ಕೊಟ್ಟಿರುತ್ತೇನೆ. ಅದರಲ್ಲಿ 1 ನೇ ಪ್ರತಿವಾದಿಯು ಹಾಕಿದ್ದ ದಾವಾವನ್ನು ವಾಪಸ್ಸು ಪಡೆಯುವಂತೆ ಮಾಡುತ್ತೇನೆಂದು ಉಷಾದೇವಿಯವರು ಹೇಳಿದ್ದು ಅದನ್ನು ಕರಾರಲ್ಲಿ ಬರೆಸಿದ್ದೆ ಎನ್ನುತ್ತಾರೆ. 1 ನೇ ಪ್ರತಿವಾದಿ ಹಾಕಿದ ದಾವಾ ಕಾನೂನು ಬದ್ದವಾಗಿತ್ತು ಅಂದರೆ ಸರಿಯಲ್ಲ. ಯಾವ  ಕಾರಣಕ್ಕಾಗಿ 1 ನೇಪ್ರತಿವಾದಿಗೆ ಒತ್ತಡ ಹಾಕಿರುತ್ತೀರಾ ಅಂದರೆ ನೋಂದಣಿ ಮಾಡಿಸಲು ಅವರು ಖಾಲಿ ಮಾಡುವುದು ಕಡ್ಡಾಯವಾಗಿತ್ತು ಎನ್ನುತ್ತಾರೆ.

ದಿಃ 04.03.2008 ರೊಳಗೆ ಕರಾರಿನ ಸ್ವತ್ತನ್ನು ನೋಂದಣಿ ಮಾಡಿಸಿಕೊಳ್ಳಬೇಕೆಂದು ಒಪ್ಪಂದ ಪತ್ರದಲ್ಲಿ ಹೇಳಲಾಗಿತ್ತು ಅಂದರೆ ಸರಿ. ಆ ದಿನಾಂಕ ಮುಗಿದ ನಂತರ ಉಷಾದೇವಿಯವರಿಗೆ ನಾನು ನೋಟೀಸ್ಸು ಕೊಟ್ಟಿರುತ್ತೇನೆ. ಸದರಿ ನೋಟಿಸ್ಸಿಗೆ ಅವರು ಪ್ರತ್ಯುತ್ತರವನ್ನು ಕೊಟ್ಟಿರುತ್ತಾರಾ ಅಂದರೆ ಇಲ್ಲ ಎನ್ನುತ್ತಾರೆ. ದಿಃ 30.03.2008 ಕ್ಕೆ ನನಗೆ ನೋಟೀಸ್ಸು ಕೊಟ್ಟಿರುತ್ತಾರಾ ಅಂದರೆ ನನಗೆ ಬಂದಿಲ್ಲ ಎನ್ನುತ್ತಾರೆ. ನಾನು ಓ.ಎಸ್.ನಂಬರ್ 66/2011 ರಲ್ಲಿ ನನಗೆ ನೋಟೀಸ್ಸು ತಲುಪಿರುತ್ತದೆ ಎಂದು ನಾನು ಒಪ್ಪಿಕೊಂಡಿರುತ್್ತೇನೆ ಅಂದರೆ ಸರಿ. ಆ ನೋಟೀಸ್ಸಿನಲ್ಲಿ ಅವರು ಮೂಲ

ದಾಖಲಾತಿಗಳನ್ನು ಕೊಟ್ಟರೆ ನೋಂದಣಿ ಮಾಡಿಸಿಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ ಅಂದರೆ ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತು ಹೆಚ್ಚಿನ ಬೆಲೆಗೆ ಹೋಗುತ್ತದೆ ಎಂದು ಅವರಿಗೆ ಯಾವ ದಾಖಲಾತಿಯನ್ನು ಕೊಟ್ಟಿಲ್ಲ ಅಂದರೆ ಸರಿಯಲ್ಲ. ಆ ಕಾರಣ ಅವರು ನನ್ನ ಮೇಲೆ ಓ.ಎಸ್.ನಂಬರ್ 66/2011 ರ ದಾವಾ ಅನ್ನು ಹಾಕಿರುತ್ತಾರೆ ಅಂದರೆ ಅವರೇ ನೋಂದಣಿಗೆ ಬರದೇ ಕೇಸು ಹಾಕಿರುತ್ತಾರೆ ಎನ್ನುತ್ತಾರೆ.

ಓ.ಎಸ್.ನಂಬರ್ 73/2007 ರಲ್ಲಿ 2 ನೇ ಪ್ರತಿವಾದಿ ಪಕ್ಷಗಾರರಲ್ಲ ಅಂದರೆ ಸರಿ. ಸದರಿ ದಾವಾದಲ್ಲಿ ನನಗೆ ಆರೋಗ್ಯ ಸರಿ ಇಲ್ಲದಿದ್ದಾಗ ನನ್ನ ಮೇಲೆ ಒತ್ತಡ ಏರಿ ಕರಾರು ಮಾಡಿಕೊಂಡಿರುತ್ತಾರೆ ಎಂದು ಹೇಳಿರುತ್ತೇನೆ ಅಂದರೆ ಸರಿ. 2008 ರಲ್ಲಿ ನಾನು ನೋಂದಣಿಗೆ ಸಿದ್ದ ಇದ್ದೇನೆಂದು ನೋಟೀಸ್ಸು ಕೊಟ್ಟಿರುತ್ತೇನೆ ಅಂದರೆ ಸರಿ. ದಾವಾ ಹಾಕುವ ಮೊದಲು ನಾನೇ ನೋಟೀಸ್ಸು ಕೊಟ್ಟು ದಾವಾ ಹಾಕಿದ ನಂತರ ಒತ್ತಡ ಏರಿ ಕರಾರು ಮಾಡಿಕೊಂಡಿರುತ್ತಾರೆ ಎಂದು ಹೇಳಿರುತ್ತೇನೆ ಅಂದರೆ ಸರಿಯಲ್ಲ. ನಾನು ಬೆಲೆಯನ್ನು ರೂ. ಇಪ್ಪತ್ತು ಲಕ್ಷಕ್ಕೆ ಹೇಳಿದ್ದು ಅವರು ಏಳು ಲಕ್ಷ ಬರೆದುಕೊಂಡಿರುತ್ತಾರೆಂದು ಹೇಳಿರುತ್ತೇನೆ ಅಂದರೆ ಸರಿ.

ಒಪ್ಪಿಗೆ ಪತ್ರದಲ್ಲಿ ಅವಧಿಯೊಳಗೆ ಬಾಕಿ ಹಣವನ್ನು ಪಾವತಿ ಮಾಡಲು ವಿಳಂಬ ಮಾಡಿದರೆ ನೀವು ಕೊಟ್ಟ ಮುಂಗಡದಲ್ಲಿ ರೂ. ಇಪ್ಪತ್ತುಸಾವಿರ ಹಣವನ್ನು ಹಿಡಿದು ಉಳಿದ ಹಣವನ್ನು ನಿಮಗೆ ವಾಪಸ್ಸು ಕೊಡುತ್ತೇನೆಂದು

ಬರೆಸಿರುತ್ತೇನೆ ಅಂದರೆ ಸರಿ. ನನ್ನ ಒಪ್ಪಿಗೆ ಪ್ರಕಾರ ಕರಾರು ಮಾಡಿಕೊಂಡು ಆನಂತರ ಒತ್ತಡ ಏರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಒತ್ತಡ ಏರಿ ಕರಾರು ಮಾಡಿಕೊಂಡಿರುತ್ತಾರೆ ಎಂದು 2010 ರವರೆಗೆ ನಾನು ಯಾವುದೇ ದಾವಾ ಹಾಕಿಲ್ಲ ಅಂದರೆ ಸರಿ. ನನಗೆ ಸರ್ವೆ ನಂಬರ್ 51/2 ನನ್ನ ಪಾಲಿಗೆ ಬಂದಿಲ್ಲ ಅದರ ಮೇಲೆ ನನಗೆ ಯಾವುದೇ ಹಕ್ಕಿಲ್ಲದಿದ್ದರೂ ಸಹ ಈ ದಾವಾ ಹಾಕಿದ್ದೇನೆ ಅಂದರೆ ಸರಿಯಲ್ಲ. ಪಾಲು ಪಟ್ಟಿ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿರುತ್ತೇವೆ ಅಂದರೆ ಸರಿ.

ಓ.ಎಸ್.ನಂಬರ್ 66/2011 ರಲ್ಲಿ ನನ್ನ ಎಂ.ಸಿ. ಕಾಪಿಯನ್ನು ಹಾಜರುಪಡಿಸಿದ್ದು ಅದರಲ್ಲಿ ನಾನು ಸರ್ವೆ ನಂಬರ್ 51, 51/1, 51/2 ಗಳು ನನಗೆ ಪಾಲುಪರಿಕತ್ತಿನಲ್ಲಿ ಬಂದಿದೆ ಎಂದು ಹೇಳಿರುತ್ತೇನೆ ಅಂದರೆ ಸರಿ. ಇದು ಎಂ.ಸಿ. ಕಾಪಿಯಲ್ಲಿ ನಮೂದಾಗಿದೆ ಅಂದರೆ ಸರಿ. ನಾನು ಒತ್ತಡ ಏರಿ ಸದರಿ ಎಂ.ಸಿ.ಯನ್ನು ಮಾಡಿಸಿಕೊಂಡಿರುತ್್ತೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯು ವಿಲ್ಲು ಮೂಲಕ ಬಂದಿರುತ್ತದೆ ಹೊರತು ನನಗೆ ವಿಭಾಗದ ಮೂಲಕ ಬಂದಿಲ್ಲ ಅಂದರೆ ಸರಿಯಲ್ಲ. 1979 ರಲ್ಲಿ ನನಗೆ ಬೆಂಗಳೂರಿನಲ್ಲಿ ಸ್ವಯಾರ್ಜಿತ ಆಸ್ತಿ ಇದ್ದು ಅದನ್ನು ಬಿಟ್ಟು ಪಾಲುಪರಿಕತ್ತು ಮಾಡಿಕೊಂಡಿರುತ್ತೇವೆ ಎನ್ನುತ್ತಾರೆ.

ದಾವಾ ಸ್ವತ್ತನ್ನು ನಾನು 2 ನೇ ವಾದಿಗೆ ಮಾಡಿಕೊಟ್ಟಿರುತ್ತೇನೆ ಅಂದರೆ ಸರಿ. ಆ ಸಂದರ್ಭದಲ್ಲಿ ನಾನು ನಾನೇ ಸ್ವಾಧೀನದಲ್ಲಿದ್ದೇನೆ ಎಂದು ಕ್ರಯಪತ್ರದಲ್ಲಿ

ಬರೆಸಿದ್ದೇನೆ ಅಂದರೆ ಸರಿಯಲ್ಲ. ಸದರಿ ಕ್ರಯ ಪತ್ರವನ್ನು ಸಾಕ್ಷಿಗೆ ಓದಿ ಹೇಳಲಾಗಿದ್ದು ಆನಂತರ ನಾನು ಸ್ವಾಧೀನದಲ್ಲಿದ್ದೇನೆ ಎಂದು ಅದರಲ್ಲಿ ಹೇಳಿರುತ್ತೇನೆ ಎನ್ನುತ್ತಾರೆ. ನಾನು 2 ನೇ ವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವಾಗ ಅದರ ಮೇಲೆ ದಾವಾ ಇದ್ದ ವಿಚಾರ ಹೇಳಿಲ್ಲ ಅಂದರೆ ಸರಿಯಲ್ಲ. ಅಷ್ಟೊತ್ತಿಗಾಗಲೇ ಕೇಸು ಮುಕ್ತಾಯಗೊಂಡಿತ್ತು ಎನ್ನುತ್ತಾರೆ. ಈ ವಿಚಾರವನ್ನು ನಾವು ಕ್ರಯಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ. 2007 ರಲ್ಲಿ ನಾನು ರೂ. ಇಪ್ಪತ್ತು ಲಕ್ಷ ಹೇಳಿದ್ದು 2016 ರಲ್ಲಿ ನಾನು ರೂ. ಹನ್ನೊಂದು ಲಕ್ಷದ ಇಪ್ಪತ್ತೈದು ಸಾವಿರಕ್ಕೆ ಮಾರಾಟ ಮಾಡಿರುತ್ತೇನೆ ಅಂದರೆ ಸರಿ. ಅದರಲ್ಲಿ ನಾನು ಸರ್ವೆ ನಂಬರ್ 51/2 ನನಗೆ ಪಾಲುಪಟ್ಟಿಯ ಮೂಲಕ ಬಂದಿದೆ ಎಂದು ಹೇಳಿರುತ್ತೇನೆ ಅಂದರೆ ಸರಿ.

ದಿಃ 01.08.2016 ರಲ್ಲಿ ತೀರ್ಪು ಬಂದ ನಂತರ ಅಪೀಲು ಅವಧಿ ಮುಗಿಯುವ ವೇಳೆಗೆ ನಾನು 2 ನೇ ವಾದಿಗೆ ದಾವಾ ಸ್ವತ್ತನ್ನು ನಾನು ಇಪ್ಪತ್ತು ದಿನದಲ್ಲಿ ನೋಂದಣಿ ಮಾಡಿಕೊಟ್ಟಿರುತ್ತೇನೆ ಅಂದರೆ ಸರಿ. ಸದರಿ ತೀರ್ಪಿನ ಅನುಸಾರ 2 ನೇ ಪ್ರತಿವಾದಿಗೆ ನಾನು 1 ತಿಂಗಳ ಒಳಗೆ ಹಣವನ್ನು ವಾಪಸ್ಸು ಕೊಡಬೇಕಾಗಿದ್ದು ಕೊಟ್ಟಿರುತ್ತೀರಾ ಅಂದರೆ ಕೊಡಲು ಪ್ರಯತ್ನಪಟ್ಟಿದ್ದು ಅವರು ಪಡೆದುಕೊಂಡಿಲ್ಲ ಎನ್ನುತ್ತಾರೆ. ಸಾಂಕೇತಿಕ ಸ್ವಾಧೀನ ಅಂದರೆ ನಾನು ಸ್ವಾಧೀನದಲ್ಲಿ ಇಲ್ಲ ಮುಂದೆ ಪಡೆದುಕೊಂಡು ಬಿಟ್ಟು ಕೊಡುತ್ತೇನೆ ಎಂದು ಹೇಳಿರುತ್ತೇನೆ ಅಂದರೆ ಸರಿ. 2 ನೇ ವಾದಿಗೆ ನಾನು 2016 ರಲ್ಲಿ ಮಾರಾಟ ಮಾಡಿ

2019 ರಲ್ಲಿ ಈ ದಾವಾ ಹಾಕಿರುತ್ತೇನೆ ಅಂದರೆ ಸ್ವಾಧೀನ ಬೇಕು ಎಂದು ಈ ದಾವಾ ಹಾಕಿರುತ್ತೇನೆ ಎನ್ನುತ್ತಾರೆ. 2 ನೇ ವಾದಿಯು ಆ 3 ವರ್ಷದ ಅವಧಿಯಲ್ಲಿ ನನ್ನನ್ನು ಸ್ವಾಧೀನ ಕೊಡುವಂತೆ ಕೇಳಿಲ್ಲ ಅಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಾಯಾವಕಾಶ ನೀಡಲಾಯಿತು.**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ**
**ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
*ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,*
*ಸೋಮವಾರಪೇಟೆ.*